ಮಾಡಲಾಗುತ್ತದೆ. ಆ ದಿನ ಯಾವುದು ಎಂಬ ಕಲ್ಪನೆ ನಿಮಗೀಗ ಹೊಳೆದಿರಬಹುದು. ಪ್ರತಿ ವರ್ಷದ ನಾಲ್ಕನೆಯ ತಿಂಗಳಿನ ಮೊದಲನೆಯ ದಿನ, ಅಂದರೆ ಎಪ್ರಿಲ್ ಫೂಲ್! ಎಪ್ರಿಲ್ ಒಂದರಂದು ಗೆಳೆಯ ಗೆಳತಿಯರು ಪರಸ್ಪರ ಸುಳ್ಳು ಸುದ್ದಿಗಳನ್ನು ಹೇಳಿ ಗಲಿಬಿಲಿಯಾಗುವಂತೆ ಮಾಡಬಹುದು. ಒಮ್ಮೊಮ್ಮೆ ತೀರಾ ಅಚ್ಚರಿಯ ಸಂಗತಿಗಳನ್ನು ಹೇಳಿ ತಮ್ಮ ಪ್ರೀತಿಪಾತ್ರರನ್ನು ಸಂತೋಷದ ಕಡಲಲ್ಲಿ ತೇಲಿಸಿ ಇವರು ಸಂಭ್ರಮಿಸಬಹುದು. ಇನ್ನು ಕೆಲವು ಸ್ನೇಹಿತರು ಬಹಳ ಆಘಾತಕರ ಸುದ್ದಿ ಹೇಳಿ ಕೇಳುವಾತನ ಸಂಕಟ ಕಂಡು ಒಳಗೊಳಗೆ ನಗುತ್ತಿರುತ್ತಾರೆ. ಒಟ್ಟಿನಲ್ಲಿ ಎಪ್ರಿಲ್ ಒಂದರಂದು ಹೇಳುವ ಸುದ್ದಿಗಳನ್ನು ಯಾರೂ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಒಂದು ವೇಳೆ ಆ ದಿನದ ಬುರುಡೆ ಸಂಗತಿಗಳನ್ನು ನಂಬಿ ಸಂಭ್ರಮಿಸಿದರೆ ಅಥವಾ ಸಂಕಟಪಟ್ಟರೆ ಎಪ್ರಿಲ್ ಫೂಲ್ ಬಿರುದು ಪಡೆಯುವುದು ಗ್ಯಾರಂಟಿ!

ತಲೆಬುರುಡೆಯನ್ನು ನಾನು ಮೊದಲು ಬಾರಿ ನೋಡಿದ್ದು ಜಾದೂಗಾರರ ಆಟದಲ್ಲಿ ಎಂಬುದು ನೆನಪಿನಲ್ಲಿ ಉಳಿದಿದೆ. ನಾನು ಬಾಲಕನಾಗಿದ್ದಾಗ ನನ್ನ ಹುಟ್ಟೂರು ಅಥರ್ಗಾದಲ್ಲಿ ವರ್ಷದೊಳಗೆ ಒಂದೆರಡು ಬಾರಿ ಹಾವಾಡಿಗ ಮಾಂತ್ರಿಕರು ಬರುತ್ತಿದ್ದರು. ಲಂಡಿ ಖೋಡಿಯ ಸಮೀಪದಲ್ಲಿ ಅವರು ಇಳಿದುಕೊಳ್ಳುತ್ತಿದ್ದರು.

